ಭಾರತೀಯ ರಿಸರ್ವ್ ಬ್ಯಾಂಕ್

ಜುಲೈ 04, 2018

**ಸೂಚ್ಯ ದರಗಳ ಸಂಕಲನ ಮತ್ತು ಪ್ರಚಾರ – ಫೈನಾನ್ಸಿಯಲ್ ಬೆಂಚ್ ಮಾರ್ಕ್ಸ್ ಇಂಡಿಯಾ ಲಿಮಿಟೆಡ್ (ಎಫ್ ಬಿ ಐ ಎಲ್) ಈ ಸಂಸ್ಥೆಯಿಂದ ಅಧಿಕಾರ ವಹಿಸಿಕೊಳ್ಳುವಿಕೆ**

ಪ್ರಸ್ತುತ, ಅದೇ ಕ್ಷಣದ ಅಮೇರಿಕನ್ ಡಾಲರ್ / ಭಾರತೀಯ ರೂಪಾಯಿಯ ಸೂಚ್ಯ ದರವನ್ನು ಮತ್ತು ಇತರೇ ಪ್ರಮುಖ ಕರೆನ್ಸಿಗಳ ವಿನಿಮಯ ದರಗಳನ್ನು ದಿನ ನಿತ್ಯದ ಆಧಾರದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿ ಐ) ಸಂಕಲಿಸಿ, ಪ್ರಕಟಿಸುತ್ತಿದೆ. 2017-18 ರ 6ನೇ ದ್ವೈಮಾಸಿಕ ನೀತಿ ವಿವರಣೆಯಲ್ಲಿ ಪ್ರಕಟಿಸಿರುವಂತೆ , ಫೈನಾನ್ಸಿಯಲ್ ಬೆಂಚ್ ಮಾರ್ಕ್ಸ್ ಇಂಡಿಯಾ ಲಿಮಿಟೆಡ್ (ಎಫ್ ಬಿ ಐ ಎಲ್) ಈ ಸಂಸ್ಥೆ ಅದೇ ಕ್ಷಣದ ಅಮೇರಿಕನ್ ಡಾಲರ್ / ಭಾರತೀಯ ರೂಪಾಯಿಯ ಸೂಚ್ಯ ದರವನ್ನು ಮತ್ತು ಇತರೇ ಪ್ರಮುಖ ಕರೆನ್ಸಿಗಳ ವಿನಿಮಯ ದರಗಳ ಸಂಕಲನ ಮತ್ತು ಪ್ರಚಾರ ಕಾರ್ಯದ ಹೊಣೆಯನ್ನು ಆರ್ ಬಿ ಐ ನಿಂದ ತಾನು ವಹಿಸಿಕೊಂಡಿದೆ. ಎಫ್ ಬಿ ಐ ಎಲ್, ಅಮೇರಿಕನ್ ಡಾಲರ್ / ಭಾರತೀಯ ರೂಪಾಯಿಯ ಸೂಚ್ಯ ದರವನ್ನು ಮತ್ತು ಇತರೇ ಪ್ರಮುಖ ಕರೆನ್ಸಿಗಳ ವಿನಿಮಯ ದರಗಳ ಸಂಕಲನ ಮತ್ತು ಪ್ರಚಾರ ಕಾರ್ಯವನ್ನು ಜುಲೈ 10, 2018 (ಮಂಗಳವಾರ) ದಿಂದ ಪ್ರಾರಂಭಿಸಲಿದೆ.

ಈಗಿನಂತಯೇ, ಈ ದರಗಳನ್ನು ಪ್ರತಿ ದಿನ ( ಶನಿವಾರ, ಭಾನುವಾರ ಮತ್ತು ಬ್ಯಾಂಕ್ ರಜಾ ದಿನಗಳನ್ನು ಹೊರತುಪಡಿಸಿ) ಪ್ರಕಟಿಸಲಾಗುತ್ತದೆ ಮತ್ತು ಎಫ್ ಬಿ ಐ ಎಲ್ ನ ವೆಬ್ ತಾಣ (www.fbil.org.in) ದಲ್ಲಿ ಕಾಣಬಹುದು. ಅದರಂತೆ, ಆರ್ ಬಿ ಐ ನಿಂದ ನೀಡಲ್ಪಟ್ಟ ಸೂಚ್ಯ ದರಗಳ ಬಗ್ಗೆ ದಿನ ನಿತ್ಯದ ಪತ್ರಿಕಾ ಪ್ರಕಟಣೆ ಜುಲೈ 9, 2018 ( ಸೋಮವಾರ) ದಿಂದ ಸ್ಥಗಿತಗೊಳ್ಳುವುದು.

**ಅಜಿತ್ ಪ್ರಸಾದ್**
ಸಹಾಯಕ ಸಲಹೆಗಾರರು

**ಪತ್ರಿಕಾ ಪ್ರಕಟಣೆ : 2018-2019/35**